ಕರ್ನಾಟಕ ಸರ್ಕಾರ

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ**

**Office of the Deputy Commissioner, Mandya Dist, Mandya**

ಸಂಖ್ಯೆ: ಎಂಎಸ್‌ಸಿ(1)358/2009-10 ದಿನಾಂಕ: 19.01.2011

## ಅಧಿಕೃತ ಜ್ಞಾಪನ

ವಿಷಯ: ಕಂದಾಯ ಭೂಮಿಯನ್ನು ರಕ್ಷಿಸಲು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪ್ರಾಧಿಕಾರಗಳನ್ನು ರಚಿಸುವ ಬಗ್ಗೆ.

ಉಲ್ಲೇಖ:
1. ಅಧ್ಯಕ್ಷರು, ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ, ಬೆಂಗಳೂರುರವರ ಅ.ಸ.ಪತ್ರ ಸಂಖ್ಯೆ: CIF/18/2010-11, ದಿ: 21.06.2010 ಹಾಗೂ ಪತ್ರ ಸಂಖ್ಯೆ: ಕೆಪಿಸಿಎಲ್/ಸಿಬ್ಬಂದಿ/259/09-10, ದಿನಾಂಕ: 02.07.2010.
2. ಸರ್ಕಾರದ ಆದೇಶ ಸಂಖ್ಯೆ: ಕಂಇ.82.ಎಲ್‌ಜಿಕ್ಯೂ 99(ಪಿ-1) ದಿ: 13.11.2008.
3. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರುರವರ ಪತ್ರ ಸಂಖ್ಯೆ: ಎನ್.ಸಿಆರ್.ಎಂ.ಸಿಸಿಆರ್.15/10-11, ದಿ: 11.08.2010.

- - -

ಉಲ್ಲೇಖ (2)ರ ಸರ್ಕಾರದ ಆದೇಶ ಸಂಖ್ಯೆ: ಕಂಇ.82.ಎಲ್‌ಜಿಕ್ಯೂ.99 (ಪಿ 1) ದಿ: 13.11.2008 ರಂತೆ ಸರ್ಕಾರಿ ಹಾಗೂ ಸಾರ್ವಜನಿಕ ಭೂಮಿಯನ್ನು ರಕ್ಷಿಸಲು ಜಿಲ್ಲಾ ಮಟ್ಟದ ಪ್ರಾಧಿಕಾರಗಳನ್ನು ರಚಿಸಲಾಗಿದೆ ಹಾಗೂ ಸರ್ಕಾರದ ಆದೇಶದಂತೆ ಕರ್ತವ್ಯ ನಿರ್ವಹಿಸಲಾಗುತ್ತಿದೆ. ಈ ಕುರಿತು ಮೈಸೂರು ಪ್ರಾದೇಶಿಕ ಆಯುಕ್ತರ ಕಛೇರಿ ಸೂಚನೆಯಂತೆ ಕೆಳಕಂಡ ಸದಸ್ಯರನ್ನು ಒಳಗೊಂಡಿರುವ ಮಂಡ್ಯ ಜಿಲ್ಲಾ ಮಟ್ಟದ ಪ್ರಾಧಿಕಾರ ರಚಿಸಲಾಗಿದೆ.

ಜಿಲ್ಲಾ ಮಟ್ಟದ ಪ್ರಾಧಿಕಾರ

| | | |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ | ಸದಸ್ಯರು |
| 3 | ಉಪವಿಭಾಗಾಧಿಕಾರಿ, ಮಂಡ್ಯ/ಪಾಂಡವಪುರ ಉಪವಿಭಾಗ | ಸದಸ್ಯ ಕಾರ್ಯದರ್ಶಿ |
| 4 | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಮಂಡ್ಯ | ಸದಸ್ಯರು |
| 5 | ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಡ್ಯ ವಿಭಾಗ, ಮಂಡ್ಯ | ಸದಸ್ಯರು |
| 6 | ಕಾರ್ಯಪಾಲಕ ಅಭಿಯಂತರರು,ಕಾವೇರಿ ನೀರಾವರಿ ನಿಗಮ,ಮಂಡ್ಯ | ಸದಸ್ಯರು |
| 7 | ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ನಿಗಮ, ಮಂಡ್ಯ | ಸದಸ್ಯರು |
| 8 | ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಡ್ಯ | ಸದಸ್ಯರು |
| 9 | ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ | ಸದಸ್ಯರು |
| 10 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ | ಸದಸ್ಯರು |
| 11 | ಹಿರಿಯ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ | ಸದಸ್ಯರು |

...2..)

FROM : FAX NO. :221417 7 Feb. 2011 12:59PM P1

| | | |
|---|---|---|
| 12 | ಉಪನಿರ್ದೇಶಕರು, ಸಾರ್ವಜನಿಕ, ಶಿಕ್ಷಣ ಇಲಾಖೆ, ಮಂಡ್ಯ ಜಿಲ್ಲೆ . ಮಂಡ್ಯ | ಸದಸ್ಯರು |
| 13 | ತಹಸೀಲ್ದಾರ್, ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ಪಾಂಡವಪುರ, ನಾಗಮಂಗಲ | ಸದಸ್ಯರು |
| 14 | ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರು, ಮಂಡ್ಯ | ಸದಸ್ಯರು |

ಸರ್ಕಾರದ ಆದೇಶದಲ್ಲಿ ಸೂಚಿಸಿದಂತೆ ಪ್ರಾಧಿಕಾರದ ಸಭೆಯನ್ನು ಆಗಿಂದಾಗ್ಗೆ ನಡೆಸಿ, ಸರ್ಕಾರಿ ಜಮೀನು ಒತ್ತುವರಿ ಪತ್ತೆ ಹಚ್ಚಿ, ಒತ್ತುವರಿ ತೆರವುಗೊಳಿಸಲು ನಿಯಮ ರೀತ್ಯಾ ಕ್ರಮವಹಿಸಿ ಕಾಲ ಕಾಲಕ್ಕೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು ಹಾಗೂ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವುದು.

1. ಸರ್ಕಾರಿ ಭೂಮಿಯ ಒತ್ತುವರಿಯನ್ನು ಪತ್ತೆ ಹಚ್ಚುವುದು.
2. ಸರ್ಕಾರಿ ಭೂಮಿಯನ್ನು ಒತ್ತುವರಿಯಿಂದ ತೆರವುಗೊಳಿಸಿ, ತ್ರೈಮಾಸಿಕ ವರದಿಯನ್ನು ಸಲ್ಲಿಸುವುದು.
3. ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 192(ಎ) ರಡಿಯಲ್ಲಿ ಅಪರಾಧ ಪ್ರಕರಣಗಳನ್ನು ದಾಖಲು ಮಾಡುವುದು.

ಜಿಲ್ಲಾಧಿಕಾರಿ,
ಮಂಡ್ಯ ಜಿಲ್ಲೆ, ಮಂಡ್ಯ.

ಗೆ:

ಸಂಬಂಧಪಟ್ಟ ಎಲ್ಲರಿಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು: ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರುರವರಿಗೆ ಮಾಹಿತಿಗಾಗಿ ಕಳುಹಿಸಿದೆ.